## 6. ಸ.ಹಿ.ಪ್ರಾ. ಶಾಲೆ ಮುಂಡವಳ್ಳಿ, ತೀರ್ಥಹಳ್ಳಿ

ಸ.ಹಿ.ಪ್ರಾ.ಶಾಲೆ ಮುಂಡವಳ್ಳಿ, ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ ಶಾಲೆಯ ಪ್ರಾರ್ಥನಾ ಅಂಗಳ ವಿಶಾಲವಾಗಿದ್ದು, ಪ್ರತಿ ದಿನ ಪ್ರಾರ್ಥನೆ, ಸುಭಾಷಿತ, ಸಾಮಾನ್ಯ ಜ್ಞಾನದ ಪ್ರಶ್ನೆಗಳು, ಆರೋಗ್ಯ ಮತ್ತು ನೈರ್ಮಲ್ಯ, ವೈಯಕ್ತಿಕ ಸ್ವಚ್ಛತೆ ಇವುಗಳ ಪರಿಶೀಲನೆ ಹಾಗೂ ಮೇಲ್ವಿಚಾರಣೆಯೊಂದಿಗೆ, ಆ ದಿನದ ದಿನಪತ್ರಿಕೆಯನ್ನು ಶಾಲಾ ಮಕ್ಕಳಿಂದ ವಾಚನ ಮಾಡಿಸುವುದು ಮತ್ತು ಇತರೆ ಸೂಚನೆಗಳನ್ನು ನೀಡಲಾಗುವುದು.

ವಿಶಾಲ, ಸುಂದರ, ಸುಸಜ್ಜಿತ ಕಟ್ಟಡ ಮತ್ತು ರಂಗಮಂದಿರವಿದೆ. ಎಸ್‌ಎಸ್‌ಎ ವತಿಯಿಂದ ನಿರ್ಮಿಸಿರುವ ಆರ್‌ಸಿಸಿ ಕಟ್ಟಡ, ಬಿಸಿಯೂಟ ಕೊಠಡಿ, ಉಗ್ರಾಣ ಕೊಠಡಿ, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ, ತಾಲೂಕು ಪಂಚಾಯತ್, ಗ್ರಾಮಸ್ಥರು, ಎಸ್‌ಡಿಎಂಸಿಯವರ ಸಹಕಾರದಿಂದ ಟೈಲ್ಸ್‌ಗಳಿಂದ ನಿರ್ಮಿತವಾದ ಕಾರಿಡಾರ್ ಮಕ್ಕಳಿಗೆ ಆಡಲು, ವ್ಯಾಯಾಮ ಇತ್ಯಾದಿ ದೈಹಿಕ ಚಟುವಟಿಕೆ ಮಾಡಲು ಪೂರಕವಾಗಿದೆ.

ನಲಿ ಕಲಿ ಕೊಠಡಿಯಲ್ಲಿ ಮಕ್ಕಳಿಗೆ ಕುಳಿತುಕೊಳ್ಳಲು ಸುಸಜ್ಜಿತ ಕೊಠಡಿಯಿದೆ. ವಾಲ್‌ಸ್ಲೇಟ್, ಹವಾಮಾನ ನಕ್ಷೆ, ಕಾರ್ಡುಗಳನ್ನಿಡಲು ರ್‍ಯಾಕ್, ಕಲಿಕಾ ಸಾಮಗ್ರಿಗಳ ಜೋಡನೆ ವ್ಯವಸ್ಥಿತವಾಗಿ ಜೋಡಣೆ ಮಾಡಿ ಕಲಿಕಾ ಪೂರಕ ವಾತಾವರಣ ನಿರ್ಮಾಣ ಮಾಡಲಾಗಿದೆ.

ಶಾಲಾ ಮುಂಭಾಗ ಹಾಗೂ ಹಿಂಭಾಗದಲ್ಲಿ ಖಾಲಿಯಿರುವ ಜಾಗಗಳಲ್ಲಿ ಸುಂದರವಾದ ಉದ್ಯಾನವನವನ್ನು ನಿರ್ಮಿಸಲಾಗಿದೆ. ಇದರ ಮೂಲಕ ಮಕ್ಕಳಲ್ಲಿ ಪ್ರಕೃತಿ ಪ್ರೇಮ, ಸ್ವಚ್ಛತೆ, ಸೌಂದರ್ಯ ಪ್ರಜ್ಞೆ ಹಾಗೂ ಗೆಳೆಯರಲ್ಲಿ ಸಹಕಾರ ಮನೋಭಾವ ಬೆಳೆಸಲು ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವಂತೆ ಮಾಡಿ ತನ್ಮೂಲಕ ಸೇವಾ ಮನೋಭಾವವನ್ನು ಬೆಳೆಸಲಾಗಿದೆ. ಶಾಲಾ ಕೈತೋಟದಲ್ಲಿ ಟೊಮೆಟೋ, ತರಕಾರಿ, ಸೊಪ್ಪು ಇವುಗಳನ್ನು ಬೆಳೆದು ಮಕ್ಕಳಲ್ಲಿ ಕೃಷಿ ಚಟುವಟಿಕೆಯ ಅರಿವನ್ನು ಮೂಡಿಸಲಾಗುತ್ತಿದೆ.

ಸ.ಹಿ.ಪ್ರಾ. ಶಾಲೆ ಮುಂಡವಳ್ಳಿ ಇಲ್ಲಿನ ಆವರಣದಲ್ಲಿ ಸುಮಾರು 30 ತೆಂಗಿನಮರಗಳನ್ನು, 30 ಗೇರು ಮರಗಳನ್ನು, 5 ಸಪೋಟಾ ಗಿಡಗಳು, 5 ನೇರಲೆ ಗಿಡಗಳು, 4 ಪೇರಲ ಗಿಡ ಹಾಗೂ 4 ನಲ್ಲಿಕಾಯಿ ಗಿಡಗಳನ್ನು ಪೋಷಕರ ಶ್ರಮದಾನದಿಂದ ಬೆಳೆಸಿ, ಎಸ್‌ಡಿಎಂಸಿ ಮತ್ತು ಗ್ರಾಮ ಪಂಚಾಯಿತಿ ಸಹಕಾರದಿಂದ ನಿರ್ವಹಿಸಲಾಗುತ್ತಿದೆ. ಮಾನ್ಯ ಹೆಚ್.ವಿ. ರಾಮಯ್ಯ ರವರು ಶಾಲೆಗೆ ಭೂದಾನ ನೀಡಿರುತ್ತಾರೆ. ಅದರಲ್ಲಿ 800 ಅಕೇಶಿಯಾ, 20 ಸಾಗುವಾನಿ, 10 ನೀಲಗಿರಿ ಹಾಗೂ ಇತರೆ ಕಾಡು ಜಾತಿಯ ಮರಗಳನ್ನು ಎಸ್‌ಡಿಎಂಸಿ ಮತ್ತು ಗ್ರಾಮ ಪಂಚಾಯಿತಿ ಸಹಕಾರದಿಂದ ನಿರ್ವಹಿಸಲಾಗುತ್ತಿದೆ. ಎಸ್‌ಡಿಎಂಸಿ, ಪೋಷಕರು ಮತ್ತು ಗ್ರಾಮ ಪಂಚಾಯಿತಿ ಸಹಕಾರದಿಂದ ಶ್ರಮದಾನಮಾಡಿ ಶಾಲಾ ಕಾಂಪೌಂಡ್ ಮತ್ತು ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ.

ಅತ್ಯಂತ ಉತ್ತಮ ಎನ್ನುವಂತಹ ಉಪಗ್ರಹ ಆಧಾರಿತ EDUSAT ಕಾರ್ಯಕ್ರಮ ಶಾಲೆಯಲ್ಲಿ ಲಭ್ಯವಿದ್ದು ಮಕ್ಕಳಿಗೆ ದೃಶ್ಯ ಮಾಧ್ಯಮದ ಮೂಲಕ ಕಲಿಕೆಯ ವೈವಿಧ್ಯತೆಯನ್ನು ಮೂಡಿಸಲಾಗುತ್ತಿದೆ. SMART CLASS ಮೂಲಕ ಪಾಠವನ್ನು ಮಕ್ಕಳಿಗೆ ದೃಡೀಕರಿಸಲಾಗುತ್ತಿದೆ. ಇದರಿಂದ ಮಕ್ಕಳು ಕಲಿಕಾಂಶಗಳನ್ನು ಸುಲಭವಾಗಿ ಹೆಚ್ಚುಕಾಲ ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತಿದೆ.




















ಅನ್ನಪೂರ್ಣ
ಅಕ್ಷರ ದಾಸೋಹ ಕೊಠಡಿ



